ರಾಘವೇಂದ್ರ ರಾಜು ಕೆ. ಎಂ
ಪ್ರಯೋಗಾಲಯ ಬೋಧಕರು,
ಗಣಕ ಯಂತ್ರ ಇಂಜಿನಿಯರಿಂಗ್ ವಿಭಾಗ,
ಅಲಯನ್ಸ್ ವಿಶ್ವವಿದ್ಯಾಲಯ, ಬೆಂಗಳೂರು

## " ನೀ ಹಿಂಗ ನೋಡಬೇಡ ನನ್ನ" ಪುಸ್ತಕ: ಒಂದು ಅವಲೋಕನ

ಎಲ್ಲಿಂದ ಹೇಗೆ ಶುರು ಮಾಡಲಿ ಎನ್ನುವುದೇ ತಿಳಿಯುತ್ತಿಲ್ಲ. ಪ್ರತಿಯೊಂದು ಪಾತ್ರಗಳು ತಮ್ಮದೇ ಆದ ವೈಶಿಷ್ಟ್ಯ ಪ್ರಭಾವದಿಂದ ಅನಾವರಣಗೊಂಡಿವೆ

ಎಲ್ಲ ಪಾತ್ರಗಳು ತಮಗೆ ಕೊಟ್ಟ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸಿದಂತೆ ಬರೆದಿದ್ದಾರೆ
ದಿ|| ರವಿ ಬೆಳಗೆರೆಯವರು.

ಅವರ ಬರಹಗಳಲ್ಲಿ ನಾನು ಓದಿದ ಮೊದಲ ಕಾದಂಬರಿಯೇ " ನೀ ಹಿಂಗ ನೋಡಬೇಡ ನನ್ನ " ...
ದ.ರಾ ಬೇಂದ್ರೆಯವರಿಂದ ಮೂಡಿದ ಈ ಹಾಡಿನ ಸಾಲುಗಳು ಮುಂದೆ ದೊಡ್ಡ ಮಟ್ಟದ ಯಶಸ್ವಿಪೂರ್ಣ ಕಾದಂಬರಿಯಾಗಿ ಜನಮಾನಸದಲ್ಲಿ ಅಚ್ಚಳಿಯದೆ ಉಳಿದು ಬಿಡುತ್ತದೆ ಎಂದು ಸ್ವತಃ ಬೇಂದ್ರೆಯವರಿಗೆ ಅನ್ನಿಸಿರಲಿಲ್ಲವೇನೊ !

ಕಥೆ ಆರಂಭವಾಗುವುದೇ ಕೈನಲ್ಲಿ ಸಿಗರೇಟ್ ಸೇದುತ್ತ ಹಾರ್ಡಿ ಜೇಮ್ಸ್ ಕಾಲೇಜಿನ ಎದುರಿನ ಇರಾನಿ ಚಾಯ್ ಎಂಬ ಪುಟ್ಟಅಂಗಡಿಯಲ್ಲಿ ತನ್ನಿಬ್ಬರು ಗೆಳೆಯರಾದ
" ಚಿರಂತ್ ಹಾಗು ನಿಖಿಲ್ " ನೆದುರು ಇನ್ನು ಮೂರು ವರ್ಷದಲ್ಲಿ ಶ್ರಾವಣಿಯನ್ನು ತಾನು ಖಂಡಿತ ಒಲಿಸಿಕೊಂಡು ಅವಳ ಬಾಯಿಂದಲೇ " ಐ ಲವ್ ಯು ಶಿಶಿರ್ " ಎನಿಸುತ್ತೇನೆ ಇಲ್ಲವಾದಲ್ಲಿ ಸೀಜರ್ಸ್ ಕ್ಯಾಸೆಲ್ ಹೊಟೇಲ್ ನ ಒಂಬತ್ತನೆ ಮಹಡಿಯ ಮೇಲಿಂದ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಬೆಟ್ ಕಟ್ಟಿದ ಕಥಾನಾಯಕ ಶಿಶಿರಚಂದ್ರ .

ಆ ಹೆಸರೇ ಒಂಥರ ಸೆಳೆತ. ಏಕೆಂದರೆ ಶಿಶಿರ ಎಂದರೆ ಬರುವ ಅರ್ಥ ಕೂಡ ಚಂದ್ರ ಅಂತಲೇ , ಸಾಹಿತಿಗಳು ಶಿಶಿರ ಜೊತೆಗೇ ಚಂದ್ರ ಎಂದು ಕೂಡ ಏಕೆ ಸೇರಿಸಿದರೊ ( ಬಹುಶ ಕರೆಯಲು ಸೊಗಸಾಗಿದ್ದೀರ ಬೇಕು ಆ ಹೆಸರು / ಅಥವ ಪರಿಚಿತರ / ಸ್ನೇಹಿತರ ಹೆಸರಿರಬೇಕು ! ಸರಿಯಾಗಿ ತಿಳಿಯದು ) ಅವನದು ಸಾಫ್ಟ್ ಐಸ್ , ಎಂತಹ ಕಲ್ಲು ಮನಸ್ಸಿನವರು ಸಹ ಕರಗುವಂತಹ ಅಂಶ ಆ ಕಣ್ಣಿನಲ್ಲಿತ್ತು.

ಕಾಲೇಜಿನ ಪ್ರಿನ್ಸಿಪಾಲರ ಮುಂದೆ ತನ್ನ ಆಪ್ಲಿಕೇಷನ್ ಹಿಡಿದು ನಿಂತು ಅಡ್ಮಿಷನ್ ಕೇಳಲು ಬಂದ ಹುಡುಗನ ಅಪ್ಲಿಕೇಷನ್ ನೋಡಿದ ಪ್ರಿನ್ಸಿಪಾಲ್ ಕೂಡ ಗಾಬರಿಯಾಗಿ ಹೋಗಿದ್ದರು

ತಂದೆ ಹೆಸರು : ಗೊತ್ತಿಲ್ಲ
ತಾಯಿ ಹೆಸರು : ಶಾಂತಮ್ಮ
ವೃತ್ತಿ : ವೇಶ್ಯಾವಾಟಿಕೆ
ಆದಾಯ : ಲೆಕ್ಕವಿಲ್ಲದ್ದು .....

ಇದು ಶಿಶಿರನ ಹಿನ್ನೆಲೆ. ಆದರೂ ಅವನ ಓದಿನ ಹಿನ್ನಲೆ ನೋಡಿದರೆ ಬಹಳ ಬುದ್ಧಿವಂತ ಶಾಲೆ/ಕಾಲೇಜಿಗೆ ಮೊದಲಿಗ. ಅದನ್ನು ಕಂಡು ಗೌರವಿಸಿ ಅವನ ಅಡ್ಮಿಷನ್ ಫೀಸ್ ಕೂಡ ತಾನೇ ಕಟ್ಟಿ ಮುಂದೆ ಅದರಿಂದ ಬರುವ ಸ್ಕಾಲರ್ ಶೀಪ್ ಕೂಡ ಶಿಶಿರನಿಗೆ ಬರುವ ವ್ಯವಸ್ಥೆ ಮಾಡಿದರು ಪ್ರಿನ್ಸಿಪಾಲರು ಆದರೆ ಶಿಶಿರನಿಗೆ ಬೇಕಾಗಿದ್ದು ಅನುಕಂಪವಲ್ಲ, ಗೌರವ ಅದು ಅವನ ಓದಿನಿಂದ , ವ್ಯಕ್ತಿತ್ವದಿಂದ ಸಿಗಬೇಕೆ ಹೊರತು ತನ್ನ ಹಿನ್ನಲೆಯಿಂದ ಯಾರ ಅನುಕಂಪ ಕೂಡ ಪಡೆದುಕೊಳ್ಳುವವನಲ್ಲ ಶಿಶಿರ . ಈ ವಿಷಯ ಗೊತ್ತಾದ ಮೇಲೆ ಅವನು ಕಾಲೇಜಿಗೆ ಬರದೇ ಮನೆಯಲ್ಲೇ ಕೂತು ಎಕ್ಸಾಮ್ ಬರೆಯಲು ಮಾತ್ರ ಕಾಲೇಜಿಗೆ ಬರುತ್ತಿದ್ದ.

ಸರಿಯಾಗಿ ಕ್ಲಾಸ್ ಗೆ ಬರುತ್ತಿಲ್ಲ ಶಿಶಿರ ಎಂದು ತಿಳಿದಾಗ ಪ್ರಿನ್ಸಿಪಾಲ್ ಸ್ವತಃ ತಾವು ಈ ಹುಡುಗನಿಗೆ ಕಾಲೇಜ್ ನಲ್ಲಿ ಸೀಟ್ ಕೊಟ್ಟು ತಪ್ಪು ಮಾಡಿದಿನೆನೊ ಎನ್ನಿಸಿತ್ತು ಆದರೆ ಶಿಶಿರ " ನೀವು ಕೊಟ್ಟ ಸೀಟಿನ ಬೆಲೆಯನ್ನು ಹಣದಿಂದಲ್ಲಾ ಅಹಂನಿಂದಲ್ಲಾ ನನ್ನ ಓದಿನ ಅಂಕಗಳಿಂದ ತುಂಬಿಸಿ ನಿಮಗೆ ಗೌರವ ಸೂಚಿಸುತ್ತೇನೆ ಎನ್ನುವ ರೀತಿಯಲ್ಲಿ ಎಕ್ಸಾಮ್ ರಿಸಲ್ಟ್ ಲಿಸ್ಟ್ ನಲ್ಲಿ ಕಾಲೇಜಿಗೆ ನಂಬರ್ ಒನ್ ಸ್ಥಾನದಲ್ಲಿ ನಿಂತಿದ್ದ.

*********

ಜಗನ್ ಮೋಹನ್ ರಾವ್ , ದಿ ಗ್ರೇಟ್ ಬ್ಯುಸಿನೆಸ್ ಐಕಾನ್ . ಏಳು ನೂರು ಕೋಟಿಯ ಅಧಿಪತಿ. ತನಗೆ ಎದುರು ಬಿದ್ದವರನ್ನು ಹೆಸರೆತ್ತದಂತೆ ಮಾಡಿ ಬಿಡುತ್ತಿದ್ದ ಭೂಪ ಆದರೆ ಮನೆಯಲ್ಲಿ ಹೆಂಡತಿಯ ಕಡೆಗೆ ಚೂರು ಪ್ರೇಮ ತೋರದ ಮಹಾ ಕೋಪಿಷ್ಟ. ಮಗಳು ಶ್ರಾವಣಿಯನ್ನು ಎತ್ತಿ ಆಡಿಸಲಿಲ್ಲ, ಬೈದು ಗದರಲೂ ಇಲ್ಲಾ. ಶಾಲೆಯಿಂದ ತಂದ ಮಾರ್ಕ್ಸ್ ಕಾರ್ಡ್ ನಲ್ಲಿ ತನ್ನ ಸಹಿ ಹಾಕುವಾಗ ಮಗಳಿಗೆ ಮೆಚ್ಚುಗೆಯ ಮಾತು ಸಹ ಆಡದವನು. ಬಹಳ ಒರಟು ಮನುಷ್ಯ ಬರಿ ಹೊರಗಿನ ಪ್ರಪಂಚಕ್ಕೆ ಮಾತ್ರವಲ್ಲದೆ ತನ್ನ ಮನೆಯಲ್ಲೂ ಅದೇ ದಾಟಿ ಅವನದ್ದು. ಆದರೆ ಅವನ ದೇಹ , ಪ್ರೇಮ , ವ್ಯಾಪಾರ , ಮೋಹ ಎಲ್ಲವನ್ನೂ ಹಂಚಿಕೊಂಡದ್ದು ಮಾತ್ರ ಶರ್ಮಿಳಾ ಜೊತೆಗೆ. ನೋಡಲು ಜಿಂಕೆಯಂತ ಸೊಗಸಾದ ಮೈಮಾಟ. ಚಾಣಕ್ಯನಿಗಿಂತ ಹೆಚ್ಚಿನ ಬುದ್ದಿಶಕ್ತಿ. ಏಳು ನೂರು ಕೋಟಿ ಅಧಿಪತಿ ಜಗನ್ ಮೋಹನ್ ರಾವ್ ಅನ್ನುವುದಕ್ಕಿಂತ ಅವನ ಬೆಂಗಾವಲಿಗೆ ಶರ್ಮಿಳಾ ಇಲ್ಲದೆ ಹೋಗಿದ್ದರೆ ಜಗನ್ ಮೋಹನ್ ರಾವ್ ಏನೇನೂ ಅಲ್ಲ ಎನ್ನಬಹುದಿತ್ತು ....

ಅಮ್ಮ ಮಮತಾಮಯಿ , ದೇವರ ಕೋಣೆ ಹೊತ್ತು ದಿನ ಪೂಜೆ ನೈವೇದ್ಯ , ಗಂಡನ ಶ್ರೇಯಸ್ಸು ವೃದ್ಧಿಯಾಗಲಿ ಎಂದು ಕೇಳುವುದು ಬಿಟ್ಟರೇ ಮತ್ತೇನು ಮಾತನಾಡಿದವಳೇ ಅಲ್ಲ , ತನ್ನ ಸ್ಥಿತಿಗೆ ತಾನೇ ನೊಂದುಕೊಂಡು ಯಾರಿಗೂ ಕಾಣದಂತೆ ಅಳುವ ಅವಳ ಅಳು ಮುಟ್ಟಿದ್ದು ಮಗಳು ಶ್ರಾವಣಿಗೆ ಮಾತ್ರ .

ಆಗ ಅವಳನ್ನು ಬಲು ಮಮತೆಯಿಂದ , ಪ್ರೀತಿಯಿಂದ , ಒಬ್ಬ ತಂದೆಯ ಸ್ಥಾನದಲ್ಲಿ ನಿಂತು ಪೋಷಿಸಿ , ಸ್ನೇಹಿತನ ಸ್ಥಾನದಲ್ಲಿ ಆಟವಾಡಿ , ತಾಯಿಯ ಸ್ಥಾನದಲ್ಲಿ ನಿಂತು ಊಟ ಮಾಡಿಸಿ , ಗುರುವಿನ ಸ್ಥಾನದಲ್ಲಿ ನಿಂತು ಪಾಠ ಮಾಡಿ , ಸಂಬಂಧಿಗಳ ಸ್ಥಾನದಲ್ಲಿ ನಿಂತು ಸಂಸ್ಕಾರ , ವಿನಯತೆ ಗೌರವಗಳನ್ನು ಕಲಿಸಿದ್ದು ಗಿರಿ ಅಂಕಲ್.

ಬುದ್ಧಿ ಬೆಳೆಯುತ್ತಾ ಹೋದಂತೆ ಗಿರಿ ಅಂಕಲ್ ಏಕೆ ತನಗೆ ಅಪ್ಪನಾಗಬಾರದಿತ್ತು ಎನಿಸಿದ್ದಂತೂ ಸುಳ್ಳಲ್ಲ ಶ್ರಾವಣಿಗೆ.

ಇತ್ತ ಮತ್ತೊಂದು ಕಡೆ ಚಿಕ್ಕಂದಿನಿಂದ ತನ್ನ ತಾಯಿಯ ವೇಶ್ಯಾ ಪ್ರವೃತ್ತಿಯನ್ನು ಕಂಡ ನೀಲಿ ಕಣ್ಣುಗಳ ಹುಡುಗ ಶಿಶಿರಚಂದ್ರ ಬೇಸತ್ತು ತನ್ನ ನಾಲ್ಕನೆ ವಯಸ್ಸಿಗೆ ತನ್ನ ತಾಯಿ ಹೇಳಿದವರನ್ನು ಅವರಿದ್ದ ಜಾಗದಿಂದ ಕರೆದುಕೊಂಡು

ಬಂದರೆ ಕೊಡುತ್ತಿದ್ದ ಎಂಟಾಣೆಯನ್ನು ಡಬ್ಬಕ್ಕೆ ತುಂಬಿ ಜೋಪಾನ ಮಾಡಿದ್ದವ ಕೊನೆಗೂ ಬೇಸತ್ತು ಆ ದುಡ್ಡಿನ ಡಬ್ಬ ಒಡೆದು ಅಷ್ಟು ಹಣವನ್ನು ತನ್ನ ಪುಟ್ಟ ಕೈನಲ್ಲಿ ಹಿಡಿದು ಅಮ್ಮನ ಮುಂದೆ ನಿಂತು
" ಅಮ್ಮ ನೀನು ಸತ್ತು ಹೋಗು " ಎಂದಿದ್ದ.

ಅಂದು ಮುರಿದ ಅಮ್ಮ ಮಗನ ನಡುವಿನ ಮಾತುಕತೆ ಮಗ ಇಪ್ಪತ್ತು ವರ್ಷದವನಾದರೂ ಏನೊಂದು ಆಡಲಿಲ್ಲ. ಅಸಲಿಗೆ 10 ವರ್ಷಗಳ ಕಾಲ ಅವನು ಮನೆಯಲ್ಲೇ ಇರಲಿಲ್ಲ. ನಂತರ ಯಾರೊ ಬುದ್ಧಿ ಹೇಳಿ ಕಳಿಸಿಕೊಟ್ಟಂತೆ ಮರಳಿ ಮನೆಗೆ ಬಂದರೂ ಏನೊಂದು ಮಾತನಾಡದೆ ತನ್ನ ಊಟದ ದುಡ್ಡನ್ನು ಸಹ ತಾನು ತಿನ್ನುವ ತಟ್ಟೆಯ ಮುಂದೆ ಇಟ್ಟು ಹೋಗುವಷ್ಟು ಮಟ್ಟಿಗೆ ಸ್ವಾಭಿಮಾನಿಯಾಗಿ ಹೋಗಿದ್ದ ಶಿಶಿರಚಂದ್ರ. ಅದಕ್ಕೆ ಕಾರಣ ಇನ್ ಫೆಂಟ್ ಜೀಸಸ್ ಚರ್ಚ್ ನ ಪಾದ್ರಿ ದೈವಸಹಾಯಂ. ಮನೆ ತೊರೆದ ಹುಡುಗ ಶಿಶಿರನಿಗೆ ಬುದ್ಧಿ ಮಾತು ಹೇಳಿ , ವಿದ್ಯಾಭ್ಯಾಸ ಒದಗಿಸಿ ಉತ್ತಮ ಗುಣವಂತನನ್ನಾಗಿ ಮಾಡಿದ್ದು ಇದೇ ಇನ್ ಫೆಂಟ್ ಜೀಸಸ್ ಚರ್ಚ್ ನ ಪಾದ್ರಿ ದೈವ ಸಹಾಯಂ ..

ತನ್ನ ಬೆಟ್ ಗೆಲ್ಲುವ ಹಠದಿಂದ ಶ್ರಾವಣಿ ಹಿಂದೆ ಬೀಳುವ ನೀಲಿ ಕಂಗಳ ಚೆಲುವ ಶಿಶಿರ ಅವಳನ್ನು ಬಿಡದೇ ಕಾಡಲು ಶುರು ಮಾಡಿದ ಹಾಗಂತ ಗಲಾಟೆ ಮಾಡುವುದಲ್ಲ , ದೂರದಿಂದಲೇ ನೋಡುವುದು. ಎಷ್ಟೋ ರಾತ್ರಿ ಅವಳ ಬಂಗಲೆಯ ಮುಂದಿನ ವಿಶಾಲವಾದ ಬಯಲಿನಲ್ಲಿ ರಾತ್ರಿ ಇಡಿ ಕಣ್ಣು ಮಿಟುಕಿಸದೆ ನಿದ್ದೆಗೆಟ್ಟು ಅವಳ ಕೋಣೆಯನ್ನೆ ದಿಟ್ಟಿಸಿ ನೋಡುತ್ತ ನಿಂತು ಬಿಡುತ್ತಿದ್ದ. ಅವನು ಇಲ್ಲೇಕಿದ್ದಾನೆ ? ತನ್ನ ಎತ್ತರದ ಕೋಣೆಯ ಕಡೆಗೆ ಏಕೆ ಗಮನ ಕೊಟ್ಟು ನೋಡುತ್ತಿದ್ದಾನೆ ಎಂದು ಅನುಮಾನ ಬಂದರೂ ಅವನ ಸಾಫ್ಟ್ ಐಸ್ ನೋಡಿ ಕಳೆದೆ ಹೋಗುತ್ತಿದ್ದಳು ಶ್ರಾವಣಿ.

ಮಲ್ಲೇಶ್ವರಂನಲ್ಲಿ ತನ್ನ ತಾಯಿಯ ಹುಟ್ಟು ಹಬ್ಬಕ್ಕೆ ಪೂಜೆ ಮಾಡಿಸಿ ಏನಾದರೂ ಗಿಫ್ಟ್ ಕೊಂಡು ಹೋಗಬೇಕು, ಅಮ್ಮನಿಗೆ ಅಚ್ಚರಿ ಮೂಡಿಸಬೇಕು ಎಂದು ಯೋಚಿಸುತ್ತ ರಸ್ತೆಯಲ್ಲೇ ನಿಂತವಳ ಮುಂದೆ ಕೈ ಮುಂದೆ ಮಾಡಿ ಗಿಫ್ಟ್ ಬಾಕ್ಸ್ ಹಿಡಿದು " ನೊಂದ ತಾಯಿಗೆ ಈ ಗಿಫ್ಟ್ ಕೊಡುವ ಮೂಲಕ ಪ್ರೀತಿಯ ಸಾಂತ್ವನ ಹೇಳು ಶ್ರಾವಣಿ " ಎಂದಿದ್ದ ಶಿಶಿರ.
ಅವಳಿಂದ ಎಂತಹ ಉತ್ತರ ಬರಬಹುದು? ಅಕಸ್ಮಾತ್ ಬಂದರೆ ಗಿಫ್ಟ್ ಬೇಡ ಎನ್ನಬಹುದು ಅಷ್ಟೇ ಎಂದು ಊಹಿಸಿದ್ದ ಶಿಶಿರನಿಗೆ " ನಿನ್ನಂತಹ ಸರಗಳ್ಳನಿಂದ ಪಡೆದ ಗಿಫ್ಟ್ ನನಗೆ ಬೇಡ ಅದನ್ನು ನನ್ನ ತಾಯಿಗೂ ಕೊಡುವುದಿಲ್ಲ " ಎಂದು ಮುಖದ ಮೇಲೆ ಹೊಡೆದಂತೆ ಆಡಿ ಬಿಟ್ಟಿದ್ದಳು ಶ್ರಾವಣಿ . ಅಸಲಿಗೆ ತಾನು ಸರಗಳ್ಳನೆಂದು ಯಾರಿಗೂ ತಿಳಿಯದು ಸದಾ ಜೊತೆಯಲ್ಲೇ ಇರುವ ಸ್ನೇಹಿತರಾದ ಚಿರಂತ್ ಹಾಗೂ ನಿಖಿಲ್ ಗೂ ಸಹ ಬಿಟ್ಟುಕೊಡದ ವಿಷಯ ಇವಳಿಗೆ ಹೇಗೆ ತಿಳಿಯಿತು ಎಂದು ಕಂಗಾಲಾಗಿ ಹೋದ ಶಿಶಿರಚಂದ್ರ .

ಆದರೂ ತನ್ನ ಬೆಟ್ ಗೆಲ್ಲಲೇಬೇಕು ಎಂದು ಹಠ ಹಿಡಿದು ಅವಳನ್ನೇ ಹಿಂಬಾಲಿಸಿದ . ಸೆಂಟ್ರಲ್ ಲೈಬ್ರರಿಯಲ್ಲಿ ನನಗೆ ಬೇಕಾಗಿದ್ದ " ಡಿಫಿಕಲ್ಟ್ ಲೇಡಿ " ಪುಸ್ತಕ ಸಿಗಲಿಲ್ಲ ಎಂದು ಪರದಾಡಿದ್ದಳು ಶ್ರಾವಣಿ. ಆ ಪುಸ್ತಕದ ಸ್ಟಾಕ್ ಎಲ್ಲೂ ಇರಲಿಲ್ಲ. ಅದನ್ನು ಓದುವ ಆಸೆ ಕೈಚೆಲ್ಲಿ ಕೂತವಳ ಎದುರಿಗೆ ಬಂದ ಶಿಶಿರಚಂದ್ರ . ಆಗಸದಿ ರವಿ ಮರೆಯಾಗುವ ಸಮಯವದು ಸ್ವಿಮ್ಮಿಂಗ್ ಮುಗಿಸಿ ಸ್ನಾನ ಮಾಡಿಕೊಂಡು ಬಂದು ತನ್ನ ಕೈನಿಯನ್ನು ಏರಿ ಹೊರಗೆ ಬರುತ್ತಲಿದ್ದವಳಿಗೆ ಗೇಟಿನ ಎದುರಿಗೆ ಶಿಶಿರಚಂದ್ರ ನಿಂತಿದ್ದಾನೆ ಎಂದು ಗಮನಿಸಿದರೂ ಅವನಿಗೆ ಏಕೆ ಹೆದರಬೇಕು. ಏಳು ನೂರು ಕೋಟಿ ಒಡೆಯ ಜಗನ್ ಮೋಹನ್ ರಾವ್ ನ ಮಗಳಾದ ನಾನು ಅಪ್ಪನಂತೆ ಧೈರ್ಯವಂತಳು ಒಬ್ಬ ಸರಗಳ್ಳನಿಗೆ ಹೆದರುವ ಭಯ ಪಟ್ಟು ತಲೆ ಎತ್ತದೆ ದೂರದಿಂದ ಹೋಗುವಂತಹದ್ದೇನು ? ಅದೇನು ಮಾಡುತ್ತಾನೊ ನಾನು ನೋಡಿಯೇ ಬಿಡುತ್ತೇನೆ ಎಂದು ಗೇಟಿನ ಬಳಿ ಹೋದವಳನ್ನು ಮಾತನಾಡಿಸಿದ್ದ ಶಿಶಿರ ...

ಅವನ ಮಾತಿಗಿಂತ ಆ ಕ್ಷಣದಲ್ಲಿ ಅವನ ಕೈನಲ್ಲಿ ತಾನು ಬಹು ದಿನಗಳಿಂದ ಹುಡುಕುತ್ತಿದ್ದ " ಡಿಫಿಕಲ್ಟ್ ಲೇಡಿ " ಕಾದಂಬರಿ ಇದ್ದದ್ದು ಕಂಡು ಬಹಳ ಸಂತಸ ಪಟ್ಟಳು ಆದರೂ ಅದನ್ನು ಹೊರಗೆ ತೋರಿಸಿಕೊಳ್ಳಲಿಲ್ಲ. ಅದರಲ್ಲೂ ಅವನ ಮುಖದಲ್ಲಿ ಸದಾ ಆಕಾಶದಲ್ಲಿ ಮಿನುಗುವ ಕಿಲ್ಲಿಂಗ್ ಐಸ್.

ನನ್ನ ಕೈನಲ್ಲಿರುವ ಈ ಪುಸ್ತಕ ನೀವು ಬಹುದಿನಗಳಿಂದ ಹುಡುಕುತ್ತಿದ್ದೀರ ಅಂತ ಗೊತ್ತು ಹಾಗಂತ ನಿಮಗೆ ತಂದು ಕೊಟ್ಟು ನಾನು ದೊಡ್ಡ ಸಹಾಯ ಮಾಡಿದ್ದೇನೆ ಎಂದು ಹೇಳಲು ಬಂದಿಲ್ಲ ಬದಲಾಗಿ ನಿಮ್ಮಿಂದ ಸಹಾಯ ಬೇಡಲು ಬಂದಿದ್ದೇನೆ. ನಿಮ್ಮ ಬಳಿ ಇರುವ
" ನೊಬಡೀಸ್ ಸನ್ " ಪುಸ್ತಕ ನನಗೆ ಓದಲು ಕೊಡಿ ಸಾಕು. ಪೂರ್ತಿ ಓದಿ ಮುಗಿಸಿದ ಮಾರನೇ ದಿನವೇ ಅದನ್ನು ಮರಳಿ ನಿಮಗೆ ತಂದು ತಲುಪಿಸುತ್ತೇನೆ. ಮತ್ತೆಂದೂ ನಿಮಗೆ ತೊಂದರೆ ಕೊಡುವುದಿಲ್ಲ ಕಡೆಪಕ್ಷ ನನ್ನ ಮುಖ ನೋಡಲು ನಿಮಗೆ ಕಷ್ಟವಾದರೆ ಆ ಪುಸ್ತಕವನ್ನು ನಿಮ್ಮ ಸ್ನೇಹಿತೆ ವಲ್ಲಿಯ ಕಸಿನ್ ( ನಿಖಿಲ್ ) ಗೆ ತಲುಪಿಸಿ ಅವನಿಂದ ವಲ್ಲಿಯ ಮುಖಾಂತರ ನಿಮಗೆ ಸಿಗುವಂತೆ ಮಾಡುತ್ತೇನೆ
" ನೋಬಡೀಸ್ ಸನ್ " ಬುಕ್ ಕೊಡಲು ನೀವೆ ಬರಬೇಕೆಂದೆನಿಲ್ಲ ನಾನು ಆಗಲೇ ಹೇಳಿದಂತೆ ನಿಮ್ಮ ಸ್ನೇಹಿತೆ ವಲ್ಲಿಯ ಮೂಲಕ ಅವಳ ಕಸಿನ್ ನಿಖಿಲ್ ಗೆ ತಲುಪುವಂತೆ ಮಾಡಿ ನಾನು ಆ ಪುಸ್ತಕವನ್ನು ಅವನಿಂದಲೇ ಪಡೆಯುತ್ತೇನೆ ಎಂದು ಕೇಳಿಕೊಂಡ. ಅವನ ಮಾತಿಗೆ ಒಪ್ಪಬಾರದೆನ್ನುವ ಕಷ್ಟವೇನು ಬರಲಿಲ್ಲ ಶ್ರಾವಣಿಗೆ.

ಸರಿ ಎಂದು ಒಪ್ಪಿಗೆ ಇತ್ತವಳು ಮುಂದಕ್ಕೆ ಹೊರಡುವ ಮುನ್ನವೇ ಒಂದು ನಿಮಿಷ ತಾಳು ಶ್ರಾವಣಿ ಎಂದ.

ಮತ್ತೇನು ಹೇಳುವನೊ ಎಂದು ನಿಂತವಳ ಕಣ್ಣಲ್ಲಿ
ತಾನು ಸರಗಳ್ಳನೆನ್ನುವ ಬಿಂಬ ಕಾಣುತ್ತಿತ್ತು. ಅವ್ಳಿಗೆ ನನ್ನ ಮೇಲಿರುವ ಈ ಅಸಹ್ಯ ಭಾವನೆ ದೂರ ಮಾಡಬೇಕು ಎಂದು ನಿರ್ಧಾರ ಮಾಡಿದವನಂತೆ

" ಶ್ರಾವಣಿ ನಾನು ಕದ್ದ ಅಷ್ಟೂ ಮಹಿಳೆಯರ ಚಿನ್ನವನ್ನು ಅವರೆಲ್ಲರಿಗೂ ಚಾಚು ತಪ್ಪದೇ ಮರಳಿಸಿದ ದಿನ ಆ ವಿಷಯ ನಿನಗೂ ಗೊತ್ತಾಗುತ್ತದೆ, ಗೊತ್ತಾಗುವಂತೆ ಮಾಡುತ್ತೇನೆ ಎನ್ನುವ ದಾಟಿಯಲ್ಲೇ ನಮ್ಮ ಹಾರ್ಡಿ ಜೇಮ್ಸ್ ಕಾಲೇಜಿನ ಎದುರಿಗಿರುವ ಇರಾನಿ ಚಾಯ್ ಅಂಗಡಿಯಲ್ಲಿ ನನ್ನ ಜೊತೆ ಅರ್ಧ ಕಪ್ ಟೀ ಕುಡಿಯಬೇಕು ಇದೊಂದು ನಡೆಸಿಕೊಡು ಎಂದು ಕೇಳಿಕೊಂಡ .

ನನ್ನ ಪ್ರಾಮಾಣಿಕತೆ ಏನು ಎಂಬುದನ್ನು ನಾನು ತೋರಿಸಿಯೆ ತೀರುತ್ತೇನೆ ಎನ್ನುವ ದಿಟ್ಟ ನಿರ್ಧಾರದಿಂದಲೇ ತಿಳಿಸಿ ಅಲ್ಲಿಂದ ಶ್ರಾವಣಿಯ ಮಾತಿಗೂ ಕಾಯದೆ ಹೊರಟು ಬಿಟ್ಟ.

ತನ್ನ ಸ್ನೇಹಿತೆ ವಲ್ಲಿಯ ಮುಖಾಂತರ ಒಪ್ಪಂದದಂತೆ
" ನೊಬಡೀಸ್ ಸನ್ "ಪುಸ್ತಕ ಶಿಶಿರನಿಗೆ ತಲುಪಿಸಿದಳು. ಕೆಲವೇ ದಿನಗಳಲ್ಲಿ ಎಲ್ಲ ಪತ್ರಿಕೆಗಳಲ್ಲಿ ದೊಡ್ಡದೊಂದು ಸುದ್ದಿ ಹರಡಿತ್ತು. ನಗರದಲ್ಲಿ ಕಾಣೆಯಾಗಿದ್ದ 21 ಜನ ಮಹಿಳೆಯರ ಬಂಗಾರ ಮರಳಿ ಅವರಿಗೇ ಸೇರಿದೆ . ಎಲ್ಲರೂ ಅವರವರ ಒಡವೆಗಳನ್ನು ಪಡೆದುಕೊಂಡಿದ್ದಾರೆ. ಕೊಟ್ಟ ಕಂಪ್ಲೇಂಟ್ ಕೂಡ ವಾಪಸ್ಸು ಪಡೆದಿದ್ದಾರೆ ಎಂದು.

ಅದನ್ನು ಓದಿದ ಕ್ಷಣದಿಂದ ಶ್ರಾವಣಿ ನಿಜಕ್ಕೂ ಆಶ್ಚರ್ಯಗೊಂಡಿದ್ದಳು. ನನ್ನ ಒಂದೇ ಒಂದು ಮಾತಿಗೆ ತನ್ನ ಪ್ರಾಮಾಣಿಕತೆ ಏನೆಂದು ತೋರಿಸುವ ಸಲುವಾಗಿ ಶಿಶಿರಚಂದ್ರ ನಿಜಕ್ಕೂ ತಾನು ಕದ್ದ ಅಷ್ಟು ಮಹಿಳೆಯರ

ಒಡವೆಗಳನ್ನು ವಾಪಸ್ಸು ಕೊಟ್ಟನಾ ? ಅವನು ನನ್ನ ಪ್ರೀತಿಸುತ್ತಿದ್ದಾನ ? ಛೇ ಛೇ ಅಕಸ್ಮಾತ್ ಅವನು ಪ್ರೀತಿಸಿದರೂ ನಾನು ಅವನನ್ನು ಪ್ರೀತಿಸಲು ಸಾಧ್ಯವೇ ? ಸರಗಳ್ಳನನ್ನು ಯಾರಾದರೂ ಪ್ರೀತಿಸಲು ಸಾಧ್ಯವೇ ? ಈಗ ಮರಳಿ ಅವರವರ ಸರವನ್ನು ಅವರಿಗೇ ಹಿಂತಿರುಗಿಸಿದರೂ ಹಿಂದೆ ಅವರು ಹಾಕಿದ ಕಣ್ಣೀರು ಆ ನೋವು ಮಾತ್ರ ಕಡಿಮೆಯೇನು ? ಒಂದೆಡೆ ಆ ಚಿಂತೆಯಾದರೆ ಶಿಶಿರ ತಾನು ಹೇಳಿದಂತೆ ತನ್ನ ಪ್ರಾಮಾಣಿಕತೆ ಸಾಬೀತು ಪಡಿಸಿದ್ದಾನೆ. ಇದು ಅವನಲ್ಲಾದ ನಿಜವಾದ ಪರಿವರ್ತನೆಯೆ ಎಂದು ಆಲೋಚಿಸಿ ಕಾಲೇಜಿಗೆ ಬಂದವಳಿಗೆ ಶಿಶಿರ ಚಂದ್ರ ಕಾಣಲಿಲ್ಲ . ಬಹುಶ ನಾಳೆ ಬರಬಹುದು ಎಂದು ಕಾದಳು ಸತತ 15 ದಿನಗಳಾದರೂ ಅವನು ಅತ್ತ ಬರಲೇ ಇಲ್ಲಾ .

ಅಲ್ಲಿಂದಲೇ ಶುರುವಾಗಿದ್ದು ನಿಜವಾದ ಪ್ರೀತಿಯ ಹುಡುಕಾಟ . ತನ್ನ ಪ್ರಾಮಾಣಿಕತೆ ತೋರಿ ಶಿಶಿರಚಂದ್ರ ಅಂದು ಆಡಿದ ಮಾತಿನಂತೆ ಶ್ರಾವಣಿಯ ಕಣ್ಣು ಮುಂದೆ ಬರುವ ಪ್ರಯತ್ನ ಮಾಡಲೇ ಇಲ್ಲಾ.

ಅವಳಿಗೆ ತಿಳಿಯದಂತೆ ಶ್ರಾವಣಿ ಅವನ ಪೂರ್ವಾಪರಗಳನ್ನು ಹುಡುಕಿ ಶಿಶಿರನನ್ನು ಕಾಣುವ ತವಕ ವ್ಯಕ್ತ ಪಡಿಸಿದಳು. ತನ್ನ ಪ್ರಾಮಾಣಿಕತೆ ಸಾಬೀತಾದ ದಿನ ಕಾಲೇಜಿನ ಎದುರಿಗೆ ಇರುವ ಇರಾನಿ ಚಾಯ್ ಅಂಗಡಿಯಲ್ಲಿ ಅರ್ಧ ಕಪ್ ಟೀಯನ್ನು ಜೊತೆಯಲ್ಲೇ ಕುಡಿಯುವ ಎಂದು ಶಿಶಿರ ಹೇಳಿದ್ದು ಪದೇ ಪದೇ ನೆನಪಾಗುತ್ತಿತ್ತು .

ಇವುಗಳ ಮಧ್ಯೆಯೇ ಅವನಿರುವ ಗಮ್ಯ ತಿಳಿಯಲು ಹರಸಾಹಸ ಪಟ್ಟಳು. ಕೊನೆಗೂ ಅವನನ್ನು ಕಂಡು ಹಿಡಿದೆ ಬಿಟ್ಟಳು ಶ್ರಾವಣಿ ಒರಿಸ್ಸಾದ ಭುವನೇಶ್ವರ್ ಸಮೀಪದ ಸಂಬಲ್ ಪುರದ MCF ( ಮಹಾನದಿ ಕೋಲ್ ಫೀಲ್ಡ್ ) ಕಲಿದ್ದಲ ಗಣಿಯಲ್ಲಿ ಕೂಲಿ ಕಾರ್ಮಿಕನಾಗಿ ಪತ್ತೆಯಾಗಿದ್ದ ಶಿಶಿರ.

ಅದರೆ ಆ ಮಾಹಿತಿ ಅವ್ಳಿಗೆ ಸಿಕ್ಕಿದ್ದಾದರೂ ಹೇಗೆ ? ಅದರ ಜೊತೆ ಶಿಶಿರನ ತಾಯಿ ಶಾಂತಮ್ಮ ( ಪ್ರಶಾಂತಿನಿ ) ಜೀವನದಲ್ಲೂ ತಾನು ಮಹತ್ವದ ಕೆಲಸ ಮಾಡಿದ್ದಳು. ಕೊನೆಗೂ ಒಂದು ನೆಪ ಹೂಡಿ ಅವನನ್ನು ಕಾಣಲು ಹೊರಟ ಶ್ರಾವಣಿಗೆ ಶಿಶಿರನ ತಾಯಿಯನ್ನೂ ಜೊತೆಗೇ ಕರೆದುಕೊಂಡು ಬೆಂಗಳೂರಿನಿಂದ ಪ್ರಯಾಣ ಬೆಳೆಸಿದಳು.

ಅಲ್ಲಿ ಇವರಿಬ್ಬರ ನಿರೀಕ್ಷೆ ಮಾಡದ ಶಿಶಿರ ನಂತರ ಕೂಡ ಆರಾಮಾಗಿಯೆ ಇದ್ದ . ಮನದಲ್ಲಿ ಪ್ರೀತಿ ಇದ್ದರೂ ಹೇಳಿಕೊಳ್ಳಲಾರ ಇತ್ತ ಶ್ರಾವಣಿ ಕೂಡ ಅವನ ಗೈರಿನ ದಿನಗಳಲ್ಲಿ ಅವನ ಮೇಲೆ ಮೂಡಿದ ಪ್ರೀತಿ ಭಾವನೆ ಕೂಡ ಹೇಳಲಿಲ್ಲ. ಕಲಿದ್ದಲ ಗಣಿಗಳಲ್ಲಿ ಕಾಲುಗಳು ಬಿಸಿ ತಾಪಕ್ಕೆ ಕಂಪಿಸಿದರೂ ಜೊತೆಯಲ್ಲಿ ಶಿಶಿರನಿದ್ದಾನೆ ಎನ್ನುವ ಧೈರ್ಯದಿಂದ ಹೆಜ್ಜೆ ಹಾಕಿದಳು. ಮಹಾನದಿಯಲ್ಲಿ ಬಂಡೆಗಳ ಮೇಲೆ ಕೂತು ಇಬ್ಬರು ನೀರಿಗೆ ಕಾಲು ಇಳೆ ಬಿಟ್ಟುಕೊಂಡು ಒಬ್ಬರಿಗೊಬ್ಬರು ಭುಜವಂಟಿಕೊಂಡು ಕೂತು ತುಂಬಾ ಸಮಯ ಕಳೆದರು.

" ನಾನು ನಿನ್ನನ್ನು ಪ್ರೀತಿಸದೆ ಹೋದರೂ ನನ್ನನ್ನು ಹೀಗೆ ಜೋಪಾನ ಮಾಡುತ್ತಿಯ ಶಿಶಿರ " ಎಂದು ಕೇಳಿದ ಶ್ರಾವಣಿಯ ಮಾತಿಗೆ ಖಂಡಿತ ಹೌದು ಎನ್ನುವಂತೆ ಭರವಸೆ ನೀಡಿದ ಶಿಶಿರ. ಆದರೆ ಮನದಲ್ಲಿ ತಾನು ಬೆಟ್ ಗೆದ್ದೆ ತೀರುತ್ತೇನೆ ಎನ್ನುವ ಛಲವಿತ್ತು.

ಶಿಶಿರ ನಿನಗಾಗಿ ಒಂದು ಲೆಟರ್ ಈಗ ನೀನಿರುವ ಮನೆಯಲ್ಲಿ ಕಾದಿದೆ ಹೋಗಿ ನೋಡು ಎಂದು ಏರ್ಪೋರ್ಟ್ ನೊಳಗೆ ಕಾಲಿಡುವ ಮುನ್ನ ಮತ್ತೊಂದು ಮಾತು ಹೇಳಿದಳು. ತಲುಪಿದ ತಕ್ಷಣ ಕರೆ ಮಾಡುವೆ ಫೋನ್ ಬಳಿಯೇ ಇರು ಎಂದು ...

ಆದರೆ ರಾತ್ರಿ ಒಂಬತ್ತಾದರೂ ಅವಳ ಕರೆ ಬರಲಿಲ್ಲ. ಸರಿಯಾಗಿ ಹನ್ನೊಂದು ಗಂಟೆಗೆ ಶ್ರಾವಣಿ ಕರೆ ಮಾಡಿದ್ದಳು " ಅಪ್ಪನ ಕೊಲೆಯಾಗಿ ಹೋಗಿದೆ ಶಿಶಿರ ಆದಷ್ಟು ಬೇಗಾ ಬಾ " ಎಂದು ಅಳುತ್ತ ಮಾತಾಡಿದ ಶ್ರಾವಣಿಯ ಧ್ವನಿಗೆ ಇಲ್ಲ ಎನ್ನಲಾಗದೆ ತಕ್ಷಣ ಹೊರಟು ಬಿಟ್ಟ ಶಿಶಿರ ...

ಮಾರನೆಯ ದಿನದ ಪತ್ರಿಕೆಯಲ್ಲಿ ಮತ್ತೊಂದು ಸುದ್ದಿಯಾಗಿತ್ತು.

" ನರಗಕ್ಕೇ ಮರಳಿದ ಸರಗಳ್ಳನಿಂದ ಏಳು ನೂರು ಕೋಟಿ ಒಡೆಯ ಜಗನ್ ಮೋಹನ್ ರಾವ್ ಕೊಲೆಯಾಗಿದೆ " ಜೈಲಿನ ಕಂಬಿಗಳ ಮಧ್ಯೆ ಶಿಶಿರ ಬಂಧಿಯಾಗಿದ್ದ !!

ಇದು ಶ್ರಾವಣಿಯ ಯೋಜನೆಯ ? ತಾನು ಬೆಟ್ ಗೆಲ್ಲಬೇಕೆಂದು ಪಟ್ಟ ಈ ಸಾಹಸದಲ್ಲಿ ನಾನೆ ಶ್ರಾವಣಿಯ ಗಾಳಕ್ಕೆ ಬಿದ್ದ ಮೀನಾಗಿ ಬಿಟ್ಟೆನ!! ಎಂದು ಶಿಶಿರ ಯೋಚಿಸಿದ್ದ .....

ಇದು ಕೇವಲ ಕಾದಂಬರಿಯ ಅರ್ಧ ಭಾಗವಷ್ಟೇ. ಇಲ್ಲಿಂದ ನಿಜವಾದ ಪ್ರೀತಿ/ದ್ವೇಷದ ಅನಾವರಣ ಆರಂಭವಾಗುತ್ತದೆ.

ಯಾರು ಯಾರಿಗೆ ಬಲೆ ಬೀಸಿ ಗಾಳಕ್ಕೆ ಸಿಕ್ಕಿಸಿದರು ಎಂದು. ಅದನ್ನು ತಿಳಿದುಕೊಳ್ಳಬೇಕಾದರೆ ಪೂರ್ತಿ ಕಥೆ ಓದಿ ಹೆಚ್ಚಿನ ಆನಂದ ನಿಮ್ಮದಾಗಿಸಿಕೊಳ್ಳಿ.

ಕಥೆಯಲ್ಲಿ ಬರುವ ಶಿಶಿರಚಂದ್ರ, ಶ್ರಾವಣಿ, ಶಿಶಿರನ ತಾಯಿ ಶಾಂತಮ್ಮ ( ಪ್ರಶಾಂತಿನಿ ) , ಶ್ರಾವಣಿ ಅಪ್ಪ ಜಗನ್ ಮೋಹನ್ ರಾವ್ , ತಾಯಿ ಮೃಣಾಲಿನಿ , ಆಡಿ ಬೆಳೆಸಿದ ಗಿರಿ ಅಂಕಲ್ , ಶಿಶಿರ್ ಸ್ನೇಹಿತನಾದ ಚಿರಂತ್ ಹಾಗು ನಿಖಿಲ್ , ವಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತವೇ ಅದರಲ್ಲೂ ದೇವ ಮಾನವರಂತೆ ಬರುವ ಪಾತ್ರ ಚರ್ಚ್ ಫಾದರ್ ದೈವಸಹಾಯಂರವರದ್ದು. ಇವೆಲ್ಲದರ ಜೊತೆಗೇ ಶರ್ಮಿಳಾ ಎನ್ನುವ ಬಹು ಯುಕ್ತಿವಂತ ಹೆಂಗಸು.

ಮತ್ತಷ್ಟು ಪಾತ್ರಗಳು ಮುಂದಿನ ಭಾಗದಲ್ಲಿ ಓದುತ್ತ ಹೋದಂತೆ ನಿಮಗೆ ತಿಳಿಯುತ್ತದೆ. ತಪ್ಪದೇ ಓದಿ ಒಳ್ಳೆಯ ಸೊಗಸಾದ ಮನಸ್ಸಿಗೆ ಮುದ ನೀಡುವ ಭಾವ ನಿಮ್ಮದಾಗಿಸಿಕೊಳ್ಳಿ.

ಈ ಪುಸ್ತಕವನ್ನು ಲೈಬ್ರರಿಗೆ ಹಿಂತಿರುಗಿಸಿದ ಕ್ಷಣ ನನ್ನ ಜೊತೆಯೇ ನಡೆದ ಘಟನೆ ಬಹು ದೂರ ಸಾಗುತಿದೆ ಎನಿಸಿತು. ಇದರಲ್ಲಿರುವ ಪಾತ್ರಧಾರಿಗಳನ್ನು ಬಹು ಮುಕ್ಯವಾಗಿ ಶಿಶಿರಚಂದ್ರ ಶ್ರಾವಣಿಯನ್ನು ಲೈಬ್ರರಿಯ ಉಳಿದ ಪುಸ್ತಕಗಳ ಮಧ್ಯೆ ಬಂಧಿಸುತ್ತಿದ್ದೀನೆನೊ ಅನ್ನಿಸಿತು